ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.519/2021

ಪಿ .ಡಬ್ಲ್ಯೂ :1

ಸಾಕ್ಷಿಯನ್ನು ದಿಃ 09-12-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಆರೋಪಿತರುಗಳು ಗೊತ್ತು .

ದಿಃ 14-04-2021 ರಂದು ರಾತ್ರಿ 8.30 ಅಥವಾ 8.45 ರ ವೇಳೆಯಲ್ಲಿ ನಮ್ಮ ಗ್ರಾಮದ ನಮ್ಮ ತೋಟದ ಬಳಿಗೆ ನನ್ನ ಮಾರುತಿ ಜೆನ್ ಕಾರಿನಲ್ಲಿ ಹೋಗಿದ್ದೆ . 1 ಮತ್ತು 2 ನೇ ಆರೋಪಿತರುಗಳು ಮತ್ತು ಶಶಿಧರ್ ಎಂಬ ಮತ್ತೊಬ್ಬ ವ್ಯಕ್ತಿ ಟಾಟಾ ಎಸ್ ವಾಹನದಲ್ಲಿ ಬಂದು ನನ್ನ ವಾಹನವನ್ನು ಅಡ್ಡಗಟ್ಟಿದರು . 1 ನೇ ಆರೋಪಿತರು ನನ್ನ ಬಳಿಗೆ ಬಂದು ಕಾರಿನ ಒಳಗಿನಿಂದ ನನ್ನ ಕೈ ಹಿಡಿದು ಹೊರಗೆ ಎಳೆದರು . ನಂತರ ರೋಟಿ ಕುಡುಗೋಲಿನಿಂದ ನನ್ನ ಹಣೆಯ ಎಡಭಾಗಕ್ಕೆ ಹೊಡೆದರು . 2 ನೇ ಆರೋಪಿತರು ನನಗೆ ತಮ್ಮ ಕೈಗಳಿಂದ ಹಲ್ಲೆ ಮಾಡಿದರು . 1 ನೇ ಆರೋಪಿತರು ನನ್ನನ್ನು ಕೆಳಕ್ಕೆ ಬೀಳಿಸಿದರು ನಾನು ಅಲ್ಲಿಯೇ ಇದ್ದ ತಗ್ಗಿನ ಕಡೆಗೆ ಉರುಳಿ ಹೋದೆ . ನಂತರ 1 ನೇ ಆರೋಪಿತರು ಸದರಿ ತಗ್ಗಿನ ಬಳಿ ಬಂದು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ . ನಂತರ ನನ್ನ ಮೊಬೈಲ್ ಕಿತ್ತುಕೊಂಡು ಸೈಜು ಕಲ್ಲುವೊಂದರಿಂದ ಒಡೆದು ಪುಡಿ ಮಾಡಿದರು . ಅವರು ಮಾಡಿದ ಹಲ್ಲೆಯಿಂದ ನನ್ನ ಹಣೆಯ ಎಡಭಾಗದಲ್ಲಿ , ಮುಖದ ಮೇಲೆ ಮತ್ತು ಬಲ ಅಂಗೈನ ಮೇಲೆ ರಕ್ತಗಾಯಗಳಾಗಿದ್ದವು . ನಾನು ಅವರಿಗೆ ಕುಡಿಯಲು ನೀರು ಕೇಳದೆ ಆದರೆ ಅವರು ಕೊಡಲಿಲ್ಲ , ನಾನು ಸುಧಾರಿಸಿಕೊಂಡು ಬಂದು ಕಾರಿನ ಬಳಿ ಬಂದು ನೋಡಲಾಗಿ ಕಾರಿನ ಡ್ಯಾಷ್ ಬೋರ್ಡ್ ನಲ್ಲಿ ಇಟ್ಟಿದ್ದ 57 ಸಾವಿರ ನಗದು ಇರಲಿಲ್ಲ ಮತ್ತು ಕಾರಿನ ಕೀ ಕೂಡ ಇರಲಿಲ್ಲ . ಆರೋಪಿತರುಗಳು ಅಲ್ಲಿಂದ ಹೊರಟು ಹೋದರು , ಅವರು ಮಾಡಿದ್ದ ಹಲ್ಲೆಯಿಂದ ನನಗೆ ತಲೆ ಸುತ್ತುತ್ತಿತ್ತು , ಕೆಲವು ನಿಮಿಷಗಳ ನಂತರ ನಾನು ಅಲ್ಲಿಯೇ ಪ್ರಜ್ಞೆ ತಪ್ಪಿ ಬಿದಿದ್ದೆ . ರಾತ್ರಿ 12.30 ರ ನಂತರ ಎಚ್ಚರ ವಾಯಿತು . ನಂತರ ನಾನು ಕಾವಲು ದಾರಿಯ ಮೂಲಕ ನಮ್ಮ ಮನೆಗೆ ತಲುಪಿದೆ ಮತ್ತು ನನ್ನ ತಾಯಿಗೆ ವಿಚಾರ ತಿಳಿಸಿದೆ . 1 ನೇ ಆರೋಪಿತರು ಸ್ಥಳದಿಂದ ಹೋಗುವ ಮೊದಲು ನಿನ್ನನ್ನು ಸಾಯಿಸಿಯೇ ಸಾಯುಸುತ್ತೇನೆ ಎಂದು ಬೆದರಿಕೆ ಒಡ್ಡಿದರು . ವಿಚಾರ ತಿಳಿದ ನಂತರ ನನ್ನ ತಾಯಿ ನನ್ನನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಕರೆ ತಂದರು . 15 ನೇ ತಾರೀಖಿನಂದು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದೆ . ನಂತರ 16 ನೇ

ತಾರೀಖಿನಂದು ಠಾಣೆಗೆ ಹೋಗಿ ದೂರು ನೀಡಿದ್ದೇನೆ .

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 ಎಂದು ಸಾಕ್ಷಿ ಸಹಿಯನ್ನು ನಿಪಿ -2 (ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ದಿನವೇ ಪೊಲೀಸರು ಸಂಜೆ 5.15 ಕ್ಕೆ ತೋಟದ ಬಳಿ ಬಂದಿದ್ದರು . ಅಲ್ಲಿ ನಿಪಿ -2 ರಂತೆ ಮಹಜರು ಮಾಡಿದ್ದೇನೆ ನಾನು ಅವರಿಗೆ ಸ್ಥಳ ತೋರಿಸಿದ್ದೇನೆ ನಾನು ಅದಕ್ಕೆ ಸಹಿ ಮಾಡಿದ್ದೇನೆ . ನಿಪಿ -2 ರಡಿಯಲ್ಲಿ ಪೊಲೀಸರು ರೋಟಿ ಕುಡುಗೋಲನ್ನು ವಶಪಡಿಸಿಕೊಂಡಿದ್ದಾರೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ರೋಟಿ ಕುಡುಗೋಲನ್ನು ನೋಡಿ ಗುರುತಿಸಿದ್ದಾರೆ . ಅದನ್ನು ಮು ಮಾ -1 ಎಂದು ಗುರುತಿಸಲಾಯಿತು . ಮೇಲಿನ ವಿಚಾರಗಳನ್ನು ತಿಳಿಸಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-</u>

ಮೇಲೆ ಹೇಳಿದ ದಿನಾಂಕದಂದು ನಮ್ಮ ನಡುವೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ನಾನು ನಮ್ಮ ತೋಟದ ಬಳಿ ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ -1 ರ ದೂರಿನಲ್ಲಿ ನನ್ನ ಕಾರಿನ ಮತ್ತು ಟಾಟಾ ಎಸ್ ವಾಹನದ ನೋಂದಣಿ ಸಂಖ್ಯೆ ಬರೆದಿಲ್ಲ ಎಂದರೆ ಸರಿ . ನಾನು ಹೇಳುವಂತೆ ಸ್ಥಳದಲ್ಲಿ ಯಾವುದೇ ವಾಹನಗಳು ಇರಲಿಲ್ಲ , ಆರೋಪಿತರುಗಳು ಅಲ್ಲಿಗೆ ಬಂದಿಲ್ಲ , ನನಗೆ ಕಾರಿನಿಂದ ಹೊರಗೆ ಎಳೆದಿಲ್ಲ , ನನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸ್ಥಳದಲ್ಲಿ ಯಾವುದೇ ವಾಹನ ಇರಲಿಲ್ಲ , ಆದುದರಿಂದ ಕಾರಿನಿಂದ ಆರೋಪಿತರುಗಳು 57 ಸಾವಿರ ರೂಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂಬ ವಿಚಾರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರುಗಳು ನನ್ನ ಹಣೆಯ ಮೇಲೆ , ಮುಖದ ಮೇಲೆ , ಬಲ ಅಂಗೈ ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತರು ನನ್ನನ್ನು ಕೆಳಕ್ಕೆ ನೂಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತರು ನನ್ನನ್ನು ಕೆಳಕ್ಕೆ ಬೀಳಿಸದಿದ್ದರೂ , ಕೈ ಹಿಡಿದು ಎಳೆದಿದ್ದರು ನಿಪಿ -2 ರಲ್ಲಿ ಸುಳ್ಳು ವಿವರ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. 14 ನೇ ತಾರೀಖಿನಂದು ಪೊಲೀಸರು ತೋಟದ ಬಳಿ ಬರಬೇಕೆಂದು ನೋಟಿಸ್ ನೀಡಿಲ್ಲ . ನಾನು ಹೇಳುವಂತೆ ಗುಬ್ಬಿ ಸರ್ಕಾರಿ ಆಸ್ಪತ್ರೆ ಯಲ್ಲಿ ನಾನು ದಾಖಲಾಗಿಲ್ಲ , ಸ್ವತ್ತಿನ ವಿಚಾರವಾಗಿ ನನ್ನ ಮತ್ತು

ಆರೋಪಿತರುಗಳ ನಡುವೆ ಮನಸ್ತಾಪವಿರುವ ಕಾರಣ  ಅವರುಗಳ ವಿರುದ್ಧ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿತರುಗಳು ಪ್ರತ್ಯೇಕವಾಗಿ  ವಾಸವಿದ್ದೇವೆ ಎಂದರೆ ಸರಿ . ಮನೆಗಳು ಒಂದಕ್ಕೊಂದು ಹೊಂದಿಕೊಂಡಿವೆ ಎಂದು ತಿಳಿಸಿದ್ದಾರೆ. ಮೊದಲಿನಿಂದಲೂ ನನಗೆ 1 ನೇ ಆರೋಪಿತರ ನಡುವೆ  ವೈ ಮನಸ್ಸು ಇದೆ, ಆದುದರಿಂದ  ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.  ನಾನು ಹೇಳುವಂತೆ ಪ್ರಜ್ಞೆ ತಪ್ಪಿ ಬಿದ್ದಿರಲಿಲ್ಲ , ನನ್ನ ತಾಯಿಗೆ ಯಾವುದೇ ಮಾಹಿತಿ ನೀಡಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  1 ನೇ ಆರೋಪಿತರು ಮು ಮಾ -1 ರಿಂದ ನನ್ನ ಮೇಲೆ ಹಲ್ಲೆ ಮಾಡಿಲ್ಲ , ಮು ಮಾ -1 ನಾನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.  ಮು ಮಾ -1 ರಂತಹ ರೋಟಿ ಕುಡಗೋಲು ಎಲ್ಲಾ ಕಡೆ ಸಿಗುತ್ತದೆ ಅದುದರಿದ ನಾನೇ ಅದನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.   ಕೃತ್ಯ ನಡೆದ ದಿನ ನಾನು ತುಮಕೂರಿನಿಂದ ಬಂದಿದ್ದೇನೆ , ನಾನು ಹೇಗೆ ಅದನ್ನು ಸೃಷ್ಟಿಸಲು ಸಾಧ್ಯ ಎಂದು ಹೇಳಿದ್ದಾರೆ . ನಾನು ಆ ದಿನ ತುಮಕುಾರಿಗೆ ಹೋಗಿದ್ದೆ , ಊರಿನಲ್ಲಿ ಇರಲಿಲ್ಲ ,  ಪೊಲೀಸರೊಡನೆ ಶಾಮೀಲಾಗಿ ಆರೋಪಿತರುಗಳು  ವಿರುದ್ಧ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ ,  ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.